**Crl. Misc. 805/2022**
**ಪಿ.ಡಬ್ಲ್ಯು-01**

**<u>ಸಾಕ್ಷಿಯನ್ನು ದಿನಾಂಕಃ 17.02.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ. ಬಿ.ವಿ.ಎನ್. ವಕೀಲರಿಂದಃ</u>**

ನಾನು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮದುವೆ ದಿನಾಂಕಃ 16.05.2016 ರಂದು ಸಂಗಮದ ಶಿವನ ದೇವಸ್ಥಾನದಲ್ಲಿ ಆಗಿರುತ್ತದೆ. ಯಾವ ಕಂಪನಿಯ ವಾಚನ್ನು ಎದುರುದಾರರಿಗೆ ಉಡುಗೊರೆಯಾಗಿ ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ ಆದರೆ ವಾಚನ್ನು ಕೊಟ್ಟಿರುತ್ತಾರೆ. ನಮ್ಮ ತವರುಮನೆಯಿಂದ ಯಾವುದೇ ರೀತಿಯ ಉಡುಗೊರೆಯನ್ನಾಗಲೀ, ಚಿನ್ನದ ಉಂಗುರವನ್ನಾಗಲೀ ಅಥವಾ ವಾಚನ್ನಾಗಲೀ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕಡೆಯಿಂದ ವಿವಾಹದ ಆಮಂತ್ರಣ ಪತ್ರಿಕೆ ಮಾಡಿಸಿರಲಿಲ್ಲ ಆದರೆ ಎದುರುದಾರರ ಕಡೆಯಿಂದ ಮಾಡಿಸಿದ್ದರು. ನಾನು ಹಾಜರುಪಡಿಸಿರುವ ವಿವಾಹ ಆಮಂತ್ರಣ ಪತ್ರಿಕೆಯು ಎದುರುದಾರರು ಮಾಡಿಸಿರುವ ಆಮಂತ್ರಣ ಪತ್ರಿಕೆಯಾಗಿರುತ್ತದೆ. ನಮಗೆ ವಿವಾಹ ಆಮಂತ್ರಣ ಪತ್ರಿಕೆಯನ್ನೂ ಸಹ ಮಾಡಿಸುವಷ್ಟು ಆರ್ಥಿಕ ಸಾಮರ್ಥ್ಯ ನಮಗೆ ಇರಲಿಲ್ಲ ಆದ್ದರಿಂದ ಎದುರುದಾರರೇ ಎಲ್ಲಾ ಖರ್ಚು-ವೆಚ್ಚಗಳನ್ನು ಭರಿಸಿ ಮದುವೆ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ.

ನಮ್ಮ ಮತ್ತು ಎದುರುದಾರರ ನಡುವೆ ಆದ ಸಂಬಂಧ ಹೊಸ ಸಂಬಂಧವಾಗಿರುತ್ತದೆ. ಸದರಿ ಸಂಬಂಧ ನಮ್ಮ ಅತ್ತಿಗೆ ನಳಿನಿರವರ ಕಡೆಯಿಂದ ಆಗಿರುತ್ತದೆ. ಶೀಲಾವತಿ ಎಂಬುವವರು ನನಗೆ ದೂರದ ಸಂಬಂಧಿಯಾಗಬೇಕು ಮತ್ತು ನನಗೆ ಚಿಕ್ಕಮ್ಮನಾಗಬೇಕು. ಸದರಿ ನಳಿನಿ ಮತ್ತು ಶೀಲಾವತಿ ಎಂಬುವವರು ವಾರಗಿತ್ತಿಯರು ಎಂದರೆ ಸರಿ. ಎದುರುದಾರರು ನಳಿನಿಯವರ ಸ್ವಂತ ಸಹೋದರ ಎಂದರೆ ಸರಿ. ಶೀಲಾವತಿ ಎಂಬುವವರು ನಳಿನಿಯವರಿಗೆ ವಧು ಇದ್ದಾರೆ ನಿನ್ನ ತಮ್ಮನಿಗೆ ಮದುವೆ ಮಾಡಿಕೊಳ್ಳುತ್ತೀರಾ ಎಂದು ಪ್ರಸ್ತಾಪ ಮಾಡಿದಾಗ ಎದುರುದಾರರು ಒಪ್ಪಿಕೊಂಡು

ಮದುವೆಯಾಗಿರುತ್ತಾರೆಂದರೆ ಅವರು ಪ್ರಸ್ತಾಪ ಮಾಡಿದ ವಿಷಯ ನನಗೆ ಗೊತ್ತಿಲ್ಲ ಆದರೆ ನಳಿನಿಯವರೇ ನಮ್ಮ ಮನೆಗೆ ನೇರವಾಗಿ ಬಂದು ಮದುವೆ ಪ್ರಸ್ತಾಪ ಮಾಡಿದ್ದು ಆನಂತರ ನಮ್ಮ ಮನೆಯವರು ಒಪ್ಪಿದ್ದು, ನಂತರ ನಾವು ಅದ್ದೂರಿಯಾಗಿ ಮದುವೆ ನೆರವೇರಿಸಬೇಕೆಂದು ತೀರ್ಮಾನಿಸಿದಾಗ ನಳಿನಿಯವರೇ ಸರಳವಾಗಿ ಮದುವೆ ಮಾಡೋಣ ಎಂದು ಹೇಳಿರುತ್ತಾರೆ.

ನನ್ನ ತಂದೆಗೆ ಇಬ್ಬರು ಹೆಂಡತಿಯರು. ನನ್ನ ತಾಯಿ ಆಧುನಿಕತೆಗೆ ಮಾರು ಹೋಗಿ ನನ್ನ ತಂದೆಯನ್ನು ಬಿಟ್ಟು ಬಂದಿರುತ್ತಾರೆಂದರೆ ಸರಿಯಲ್ಲ. ನಂತರ ನನ್ನ ತಂದೆ ಇನ್ನೊಬ್ಬರನ್ನು ಮದುವೆಯಾಗಿರುತ್ತಾರೆಂದರೆ ನನ್ನ ತಾಯಿ ಕೂಡ ಜೊತೆಯಲ್ಲಿದ್ದು ಇನ್ನೊಬ್ಬರಿಗೆ ಜೀವ ಕೊಡುವ ಉದ್ದೇಶದಿಂದ ಇನ್ನೊಂದು ಮದುವೆಯಾಗಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಎದುರುದಾರರ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**